ಇ) ಜಾಗ್ರತ ಸಮಿತಿಗಳನ್ನು ಬೆಳಗಾಂ ಜಿಲ್ಲೆ ಮತ್ತು ಅದರ ಉಪ ವಿಭಾಗಗಳಲ್ಲಿ ರಚನೆ ಮಾಡಿದ್ದು ಅವುಗಳ ಕಾಲಾವಧಿ ಮುಂಗಿದಿರುತ್ತದೆ.

ಈ) ಬೆಳಗಾಂ ಜಿಲ್ಲೆಯಲ್ಲಿ ಹತ್ತು ಮಂದಿ ಜೀತ ವಿಮುಕ್ತರಿಗೆ ಪುನರ್ ವಸತಿಯನ್ನು ಕಲ್ಪಿಸ ಲಾಗಿದೆ.

ರಾಣೆ ಬೆನ್ನೂರಿನ ಪುರಸಭಾ ಬಾಲಕರ ಮತ್ತು ಬಾಲಕಿಯರ ಫ್ರೌಡ ಶಾಲೆಗಳ ಬಗ್ಗೆ

೧೦೧೯. ಶ್ರೀ ಕೆ. ಬಿ. ಕೋಳಿವಾಡ (ರಾಣೆಬೆನ್ನೂರು).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಣೇಬೆನ್ನೂರಿನ ಪುರಸಭಾ ಬಾಲಕರ ಮತ್ತು ಬಾಲಕಿಯರ ಪೌಢಶಾಲೆಗಳನ್ನು ಸರ್ಕಾರವು ವಹಿಸಿಕೊಳ್ಳುವುದೆ ?

ಆ) ಇಲ್ಲದಿದ್ದಲ್ಲಿ, ಅದಕ್ಕೆ ಕಾರಣಗಳು ಮತ್ತು ಯಾವಾಗ ವಹಿಸಿಕೊಳ್ಳುವುದು ?

ಶ್ರೀ ಎಂ. ರಘುಪತಿ (ಶಿಕ್ಷಣ ಮಂತ್ರಿಗಳು).—

ಅ) ರಾಣೆಬೆನ್ನೂರಿನ ಪುರಸಭೆಯಂವರು ಸದರಿ ಶಾಲೆಗಳನ್ನು ಅದರ ಸ್ಥಿರ ಮತ್ತು ಚರ ಆಸಿ-ಗಳೊಡನೆ ಸರ್ಕಾರಕ್ಕೆ ವಹಿಸಿಕೊಡಲು ತೀರ್ಮಾನಿಸಿದರೆ ಇದನ್ನು ಪರೀಕ್ಷಿಸಲಾಗುವುದು.

ಆ) ಪ್ರಶ್ನೆ (ಅ)ಗೆ ಕೊಟ್ಟಿರುವ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಕೃಷಿ ಇಲಾಖೆಯಲ್ಲಿ ಕೆಲಸ ಮಾಡುತ್ತಿರುವ ಡಿಪ್ಲೋಮಾದಾರರ ಬಗ್ಗೆ

೧೦೫೮. ಶ್ರೀ ಹೆಚ್. ಟಿ. ಕೃಷ್ಣಪ್ಪ (ನಾಗಮಂಗಲ).—ಮಾನ್ಯ ಕೃಷಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕೃಷಿ ಇಲಾಖೆಯಲ್ಲಿ ಕೆಲಸ ಮಾಡುತ್ತಿರುವ ಡಿಪ್ಲೋಮಾದಾರರ (ಎಲ್.ಎ.ಜಿ) ಸಂಖ್ಯೆ ಎಷ್ಟು ?

ಆ) ಇವರಿಗೆ ಬಡ್ತಿ ಹೊಂದು ಅವಕಾಶಗಳೇನಾದರೂ ಇದೆಯೇ ?

ಇ) ಇವರಿಗೆ ಬಡ್ತಿಕೊಡಲು ಇರುವ ಮಾರ್ಗದರ್ಶಕ ನಿಯಮಗಳು ಯಾವುವು ?

ಶ್ರೀ ಎಂ. ಪಿ. ಪ್ರಕಾಶ್ (ಕೃಷಿ ರಾಜ್ಯ ಮಂತ್ರಿಗಳು).—

ಅ) ೧೦೬

ಆ) ಹೌದು

ಇ) ಹುದ್ದೆ ಮತ್ತು ನೇಮಕಾತಿ ನಿಯಮಗಳ ಪ್ರಕಾರ

ನೆಲಮಂಗಲ ವಿಧಾನ ಸಭಾ ಕ್ಷೇತ್ರದಲ್ಲಿರುವ ದನಗಳ ಮತ್ತು ಕುರಿಗಳ ಬಗ್ಗೆ

೯೧೬. ಶ್ರೀ ಬಿ. ಗುರುಪ್ರಸಾದ್ (ನೆಲಮಂಗಲ).—ಮಾನ್ಯ ಪಶು ಸಂಗೋಪನೆ ಮತ್ತು ಪಶು ವೈದ್ಯ ಸೇವಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ನೆಲಮಂಗಲ ವಿಧಾನಸಭಾ ಕ್ಷೇತ್ರದಲ್ಲಿರುವ ದನಗಳ ಮತ್ತು ಕುರಿಗಳ ಸಂಖ್ಯೆ ಎಷ್ಟು ?

ಆ) ಒಂದು ಪಶುವೈದ್ಯ ಆಸ್ಪತ್ರೆ ಹಾಗೂ ಒಂದು ಪಶುವೈದ್ಯ ಶಾಲೆಯನ್ನು ಮಂಜೂರ ಮಾಡಲು ಎಷ್ಟು ದನಗಳ ಮತ್ತು ಕುರಿಗಳ ಸಂಖ್ಯೆ ಇರಬೇಕು ?

ಇ) ನೆಲಮಂಗಲ ವಿಧಾನಸಭಾ ಕ್ಷೇತ್ರದಲ್ಲಿರುವ ಒಟ್ಟು ಪಶುವೈದ್ಯ ಆಸ್ಪತ್ರೆ ಮತ್ತು ಪಶು ವೈದ್ಯ ಶಾಲೆಗಳ ಸಂಖ್ಯೆ ಎಷ್ಟು ?

ಈ) ಸದರಿ ಪಶುವೈದ್ಯ ಆಸ್ಪತ್ರೆ ಹಾಗೂ ಪಶುವೈದ್ಯ ಶಾಲೆಗಳಲ್ಲಿ ಕೆಲಸ ಮಾಡುತ್ತಿರುವ ಸಿಬ್ಬಂದಿ ವರ್ಗವೇನು (ಅಧಿಕಾರಿಗಳು ಸೇರಿ)